**ಅಸಲು ದಾವೆ ಸಂಖ್ಯೆ: 621/2023**
**ಪಿ.ಡಬ್ಲೂ: 1**

**<u>ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ, ಅರಕಲಗೂಡು.</u>**

**<u>ದಿನಾಂಕ:</u> 03.02.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲು:</u>** ಪ್ರತಿವಾದಿ ಪರ ವಕೀಲರು **ಶ್ರೀ. ಜೆ ಎಸ್** ರವರಿಂದ.

ನನ್ನ ತಾಯಿ ಕಾಳಮ್ಮ ರವರು ನನಗೆ 14 ವರ್ಷ ವಯಸ್ಸಿದ್ದಾಗ ತೀರಿಕೊಂಡಿರುತ್ತಾರೆ. ನನಗೆ ಈಗ 65 ವರ್ಷ . ನನ್ನ ತಾಯಿ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನ್ನ ತಂದೆ ಮೃತಪಟ್ಟಾಗ ನಾನು 5 ರಿಂದ 06 ವರ್ಷದವನಾಗಿದ್ದೆ. ನನ್ನ ತಂದೆ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನ್ನ ತಾಯಿಗೆ ದಾವಾದಲ್ಲಿ ಕಾಣಿಸಿರುವಂತಹ ಸ್ವತ್ತು ಇರಲಿಲ್ಲ ಎಂದು ನನಗೆ ತಿಳಿದಿತ್ತು ಎಂದರೆ ಸರಿಯಲ್ಲ. ನನ್ನ ತಾಯಿಗೆ ಆಗಿದ್ದ ಕ್ರಯಪತ್ರದ ಸ್ವತ್ತಿನ ಖಾತೆ ಮಾಡಿಸಿಕೊಳ್ಳಲು ಪ್ರಯತ್ನಿಸರುತ್ತೀರಾ ಎಂದರೆ ಸಾಕ್ಷಿ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ ಮೃತಪಟ್ಟ ನಂತರ ನಾವುಗಳು ದಾವಾ ಸ್ವತ್ತಿನ ಖಾತೆ ಮಾಡಿಸಿಕೊಳ್ಳಲು ಅರ್ಜಿಯನ್ನು ಗ್ರಾಮಲೆಕ್ಕಾದಿಕಾರಿಗೆ ನೀಡಿರುತ್ತೇ. ನಿಪಿ 3 ರ ಅರ್ಜಿಯನ್ನು ನಾನೇ ನೀಡಿರುತೇನೆ. 2020ನೇ ಇಸವಿಗಿಂತ ಮೊದಲು ದಾವಾ ಸ್ವತ್ತಿನ ಖಾತೆ ಮಾಡಿಸಿಕೊಳ್ಳಲು ಅರ್ಜಿ ನೀಡಿರುತ್ತೇವೆ. ಸುಮಾರು 6 – 7 ವರ್ಷಗಳ ಹಿಂದೆಯೇ ದಾವಾ ಸ್ವತ್ತಿನ ಖಾತೆ ಮಾಡಿಸಿಕೊಳ್ಳಲು ಅರ್ಜಿ ನೀಡಿರುತ್ತೇವೆ. ನನ್ನ ತಾಯಿ ಕ್ರಯಕ್ಕೆ ಕೊಂಡ ಸ್ವತ್ತಿನ ಖಾತೆ ನನ್ನ ತಾಯಿ ಹೆಸರಿಗೆ ಆಗಿರುವುದಿಲ್ಲ ಎಂಬ ವಿಚಾರವು ನನ್ನ ತಾಯಿ ತೀರಿಕೊಂಡ 15 ವರ್ಷಗಳ ನಂತರ ನಮಗೆ ತಿಳಿದಿರುತ್ತದೆ. ಸಾಕ್ಷಿ ಮುಂದುವರೆದು ನಾವು ಸದರಿ ಸ್ವತ್ತಿನಲ್ಲಿಯೇ ವಾಸವಿದ್ದೇವು ಎಂದು ನುಡಿಯುತ್ತಾರೆ. ನಿಪಿ 10 ರ ರೀತ್ಯಾ ನನ್ನ ಹೆಸರಿಗೆ ಖಾತೆಯು ಇರುತ್ತದೆ. ನಿಪಿ 10 ರಲ್ಲಿ ಹಾಕಿರುವ ದಾಖಲಾತಿಯ ಜಾಗದಲ್ಲಿ ನೀವು ವಾಸವಿರುತ್ತೀರಾ ಎಂದರೆ ಸಾಕ್ಷಿ ಅಲ್ಲಿಯೇ ವಾಸವಿರುತ್ತೇವೆ ಎಂದು ನುಡಿಯುತ್ತಾರೆ.

ದಾವಾ ಸ್ವತ್ತಿಗು ಮತ್ತು ನಾವು ವಾಸವಿರುತ್ತೇವೆಂದು ಹೇಳುತ್ತಿರುವ ಸ್ವತ್ತು ಸುಮಾರು ಅರ್ಧ ಮೈಲಿ ಅಂತರದಲ್ಲಿರುತ್ತದೆ. ನಾವು ಈಗ ವಾಸವಿರುವ ಹೆಂಚಿನ ಮನೆ. ನಾವು ಹುಟ್ಟಿ ಬೆಳೆದಿದ್ದು ಸದರಿ ಮನೆಯಲ್ಲಿ ಅಲ್ಲಾ. ನಾವು ಹುಲ್ಲಿನ ಶೆಡ್ ನಲ್ಲಿ

ಹುಟ್ಟಿ ಬೆಳೆದಿರುತ್ತೇವೆ. ಹುಲ್ಲಿನ ಶೆಡ್ ಗೆ ಬೆಂಕಿ ಬಿದ್ದು ಸುಟ್ಟು ಹೋದ ನಂತರ ಸದರಿ ಹೆಂಚಿನ ಮನೆಯನ್ನು ಕಟ್ಟಿ ಅಲ್ಲಿ ವಾಸವಾಗಿರುತ್ತೇವೆ. ನಿಪಿ 10 ರಲ್ಲಿರುವ ದಾಖಲಾತಿ ಮನೆಯಲ್ಲಿ ನನ್ನ ಸಹೋದರಿಯರ ಮದುವೆ ಅಗಿರುತ್ತದೆ. ನಿಪಿ 10 ರ ರೀತ್ಯಾ ನಾವು ವಾಸವಿರುವ ಮನೆಯ ಖಾತೆ ಸಂಖ್ಯೆ 57 ಎಂದರೆ ಸರಿ.

ಸರ್ವೆ ನಂ. 69/2 ರ ನನ್ನ ತಾಯಿಗೆ ಸಂಬಂದಪಟ್ಟ ಯಾವುದೇ ಖಾತೆ ಇರುವುದಿಲ್ಲ ಎಂದರೆ ಸಾಕ್ಷಿಯು ನಾವು ಖಾತೆ ಮಾಡಿಸಲು ಅರ್ಜಿ ನೀಡಿದ್ದೇವು ಎಂದು ನುಡಿಯುತ್ತಾರೆ. ಸರ್ವೆ ನಂ. 69/2 ರಲ್ಲಿ ನನ್ನ ತಾಯಿ ಹೆಸರಿಗೆ ಯಾವುದೇ ದಾಖಲಾತಿ ಇರುವುದಿಲ್ಲ ಎಂದರೆ ಸರಿ. ಆದರೆ ನನ್ನ ತಾಯಿ ಹೆಸರಿಗೆ ಕ್ರಯಪತ್ರ ಇರುತ್ತದೆ ಮತ್ತು ಖಾತೆ ಮಾಡಿಸಲು ನಾವು ಅರ್ಜಿ ನೀಡಿದ್ದೇವು ಎಂದು ನುಡಿಯುತ್ತಾರೆ.

ನಿಪಿ 14 ಮತ್ತು 15 ರ ರೀತ್ಯಾ ಸಂಜೀವಪ್ಪ ಮತ್ತು ಹನುಮಂತೇಗೌಡ ರವರ ಹೆಸರಿಗೆ ಇರುವ ದಾಖಲಾತಿ ಇದೆ ಎಂದರೆ ಸರಿ. ದಾವಾ ಹಾಕುವ ಕಾಲಕ್ಕೆ ದಾವಾ ಸ್ವತ್ತಿನ ಉತ್ತರಕ್ಕೆ ಜವರಮ್ಮನ ವಾಸದ ಮನೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ಸದರಿ ಜವರಮ್ಮನ ಮಗ ನಾಗೇಶ ಅವರು ಉಪನ್ಯಾಸಕರು ಎಂದರೆ ಸರಿ. ಸದರಿ ನಾಗೇಶ ರವರು ನನ್ನನ್ನು ಕರೆದುಕೊಂಡು ಬಂದು ದಾವಾ ಹಾಕಿಸಿರುತ್ತಾರೆ ಎಂದರೆ ಸರಿಯಲ್ಲ. ನಾಗೇಶ ರವರು ನಮಗೆ ಈ ದಾವಾ ಸ್ವತ್ತಿನ ಖಾತೆ ಮಾಡಿಸಿಕೊಳ್ಳಿ ಆ ನಂತರ ಸದರಿ ಸ್ವತ್ತನ್ನು ಖರೀದಿಸುತ್ತೇನೆಂದು ನಾಗೇಶ ರವರು ಹೇಳಿದ್ದರಿಂದ ನಾನು ದಾವಾ ಹಾಕಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ತಾಯಿ ಖರೀದಿಸಿದ ಎರಡುವರೆ ಗುಂಟೆ ಜಾಗವು ಸುಮಾರು 50 ವರ್ಷಗಳ ಹಿಂದೆಯೇ ಸರ್ಕಾರದವರು ರಸ್ತೆಗಾಗಿ ಪಡೆದಿರುತ್ತಾರೆ ಎಂದರೆ ಸಾಕ್ಷಿಯು 02 ಗುಂಟೆ ರಸ್ತೆಗೆ ಹೋಗಿದ್ದು 03 ಗುಂಟೆ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ತಾಯಿ ದಾವಾ ಸರ್ವೆ ನಂಬರ್ ನಲ್ಲಿ ಖರೀದಿ ಮಾಡಿದ ಪೂರ್ತಿ ಸ್ವತ್ತು ರಸ್ತೆಗಾಗಿ ಸರ್ಕಾರದ ಸ್ವಾದೀನಕ್ಕೆ ಹೋಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯ ತಂದೆ ಉಳಿಸಿಕೊಂಡಿದ್ದ ಜಾಗದ ಚಕ್ಕುಬಂದಿಯನ್ನು ಹಾಕಿ ನಾನು ಈ ದಾವಾ ತಂದಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 6 ರ ರೀತ್ಯಾ ನನ್ನ ತಾಯಿ ಖರೀದಿಸಿದ್ದು ಎರಡುವರೆ ಗುಂಟೆ ಜಾಗ ಹೊರತು 0.05ಗುಂಟೆ ಜಾಗ ಅಲ್ಲಾ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸೇರಿದ

ಸ್ವತ್ತನ್ನು ಲಪಟಾಯಿಸುವ ದುರುದ್ದೇಶದಿಂದ ನಾನು ಸುಳ್ಳು ದಾವಾ ಹಾಕಿರುತ್ತೇನೆ ಸುಳ್ಳು ದಾವಾ ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಪ್ರ.ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,**
**ಅರಕಲಗೂಡು.**